(61)

# ಕರ್ನಾಟಕ ವಿಧಾನ ಪರಿಷತ್ತು

## ಶ್ರೀ ಡಾ|| ವೈ.ಎ. ನಾರಾಯಣ ಸ್ವಾಮಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಇವರ ನಿಯಮ - 72 ರಡಿ ಗಮನ ಸೆಳೆಯುವ ಸೂಚನೆಗೆ ಲೋಕೋಪಯೋಗಿ ಇಲಾಖೆಯ ಮಾಹಿತಿ

**ವಿಷಯ:** ಭಾರತ ದೇಶದ ಅತ್ಯಂತ ಪ್ರತಿಷ್ಠಿತ ಇಂಜಿನಿಯರಿಂಗ್ ಸಂಸ್ಥೆಯಾದ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್, ಕರ್ನಾಟಕ ಈ ಸಂಸ್ಥೆಗೆ ಬೀಗ ಹಾಕಿರುವುದರಿಂದ, ಈ ಸಂಸ್ಥೆಯ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ಹಾಗೂ ತಾಂತ್ರಿಕ ನೈಪುಣ್ಯತೆ ನೀಡುವ ಶೈಕ್ಷಣಿಕ ವ್ಯವಸ್ಥೆಗೆ ದಕ್ಕೆ ಉಂಟಾಗಿರುವ ಗಂಭೀರ ವಿಚಾರವನ್ನು ಮಾನ್ಯ ಉಪ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

*****

**ಉತ್ತರ:** ಸರ್ಕಾರದ ಆದೇಶ ಸಂಖ್ಯೆ: ಲೋಇ/239/ಬಿಎಂಡಿ/1960, ದಿನಾಂಕ: 06-08-1960ರನ್ವಯ ಲೋಕೋಪಯೋಗಿ ಇಲಾಖೆಗೆ ಸೇರಿದ ಬೆಂಗಳೂರಿನ ಡಾ|| ಅಂಬೇಡ್ಕರ್ ವೀದಿಯಲ್ಲಿರುವ ನಿವೇಶನ ಸಂಖ್ಯೆ:3ರಲ್ಲಿರುವ ಸುಮಾರು 3300 ಚದರ ಯಾರ್ಡ್ ಜಾಗವನ್ನು ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಸಂಸ್ಥೆಗೆ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲ ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ.

ತದನಂತರ, ಸರ್ಕಾರದ ಆದೇಶ ಸಂಖ್ಯೆ: ಲೋ.ಇ/175/ಬಿಎಂಡಿ/1985, ದಿನಾಂಕ: 10-06-1992ರನ್ವಯ ದಿನಾಂಕ: 07-08-1992 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸಿ ಬಾಡಿಗೆಯನ್ನು ಪರಿಷ್ಕರಿಸಿ, ದಿನಾಂಕ: 31-08-2020ರ ವರೆಗೆ ನೀಡಲಾಗಿರುತ್ತದೆ. ಈ ಸಂಸ್ಥೆಯವರು ಗುತ್ತಿಗೆ ಕರಾರನ್ನು ಉಲ್ಲಂಘಿಸಿ ಉಪ ಕರಾರು ಹಾಗೂ ವಾಣಿಜ್ಯ ಚಟುವಟಿಕೆಗಳಿಗಾಗಿ ಸದರಿ ಸಂಸ್ಥೆಯ ಆವರಣವನ್ನು ಬಾಡಿಗೆಗೆ ನೀಡಿರುವುದರಿಂದ, ಸದರಿ ಸಂಸ್ಥೆಗೆ ಹಲವಾರು ಬಾರಿ ನೋಟೀಸ್ ನೀಡಲಾಗಿರುತ್ತದೆ.

ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಇವರ ಲೀಸ್ ಕರಾರು ಅವಧಿಯು 2020ನೇ ಆಗಸ್ಟ್ 31ರಂದು ಮುಕ್ತಾಯಗೊಂಡಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ: ಲೋ.ಇ/173/ಬಿಎಂಎಸ್/2020, ದಿನಾಂಕ:31-08-2020 ರನ್ವಯ ಬೆಂಗಳೂರಿನ ಡಾ|| ಅಂಬೇಡ್ಕರ್ ವೀದಿಯಲ್ಲಿರುವ ನಿವೇಶನ ಸಂಖ್ಯೆ:3ರ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ವಶಕ್ಕೆ ಪಡೆಯಲಾಗಿದೆ. ಅದರಂತೆ, ಸಂಸ್ಥೆಯ ನೌಕರರ ಮತ್ತು ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಮೊಹಜರ್ ನೊಂದಿಗೆ ಸದರಿ ಕಟ್ಟಡವನ್ನು ದಿನಾಂಕ: 31-08-2020 ರಂದು ಲೋಕೋಪಯೋಗಿ ಇಲಾಖೆಯ ವಶಕ್ಕೆ ಪಡೆಯಲಾಗಿರುತ್ತದೆ.

ಸಂಖ್ಯೆ: ಲೋಇ 11 ಬಿಎಲ್ ಕ್ಯೂ 2021

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯ ಮಂತ್ರಿಗಳು,
ಲೋಕೋಪಯೋಗಿ ಇಲಾಖೆ.